

## ಮಳೆ ನಕ್ಷತ್ರಗಳು

ಒಟ್ಟು ಇಪ್ಪತ್ತೇಳು ಮಳೆನಕ್ಷತ್ರಗಳು ಚಾಲ್ತಿಯಲ್ಲಿವೆ. ಇವುಗಳಲ್ಲಿ ಹನ್ನೆರಡು ಮಾತ್ರ ಮಳೆ ತರುತ್ತವೆ. ಎಲ್ಲ ಪ್ರದೇಶಗಳ ಕೃಷಿ ಚಟುವಟಿಕೆಗಳು ಈ ಅವಧಿಯಲ್ಲಿಯೇ ನಡೆಯುತ್ತವೆ. ಈ ಮಳೆಗಳ ಅವಧಿ ಸಾಮಾನ್ಯವಾಗಿ ಹದಿನೈದು ದಿವಸಗಳಾಗಿರುತ್ತದೆ. ಉಳಿದ ಮಳೆ ಅವಧಿಯಲ್ಲಿ ಅಲ್ಪ–ಸ್ವಲ್ಪ ಮಳೆ ಬಂದರೂ ಅದು ನಿಶ್ಚಿತವಲ್ಲ. ಹಾಗಾಗಿ ಮಳೆ ತರುವ ಹನ್ನೆರಡು ಮಳೆಗಳನ್ನು 'ಕಾಲಮೇಘ'ಗಳೆಂತಲೂ, ಉಳಿದವುಗಳನ್ನು 'ಅಕಾಲಮೇಘ'ಗಳೆಂತಲೂ ಕರೆಯುತ್ತಾರೆ.

ಪ್ರತಿ ಮಳೆಯ ಬಗ್ಗೆ ಹಳ್ಳಿಗರು ಅವರದೇ ಆದ ವ್ಯಾಖ್ಯಾನ ನೀಡುತ್ತಾರೆ. ವಿಶಾಖ ಮಳೆ ಬಂದರೆ ಬೆಳೆಗಳ ಕೀಟ–ರೋಗಗಳು ಇಲ್ಲವಾಗುತ್ತವೆ. ಅನುರಾಧ ಮಳೆ ಬಂದರೆ ಒಳ್ಳೆಯದಲ್ಲ. 'ಅನುರಾಗಿ ಬಂದು, ಮನೆ ರಾಗಿ ಹೊತ್ಕೊಂಡೋಯ್ತು' ಎಂಬ ಗಾದೆ ಮಾತಿದೆ. 'ಮೂಲಾ ಮಳೆ ಬಂದರೆ ಕೇಡು' ಎಂಬ ನಂಬಿಕೆ. 'ಕೃತ್ತಿಕೇಲಿ ಬಿತ್ತಿದ್ರೆ ಕೋರಿದಷ್ಟು ಎಳ್ಳು' ಎಂಬ ಆಶಯ.

ಕ್ಯಾಲೆಂಡರ್, ಪಂಚಾಂಗಗಳಲ್ಲಷ್ಟೇ 'ಪುನರ್ವಸು' ಎಂದು ಕರೆಸಿಕೊಳ್ಳುವ ಈ ಮಳೆ ಹಳ್ಳಿಗರ ಬಾಯಲ್ಲಿ 'ದೊಡ್ಡ ಹಸಲೆ', 'ದೊಡ್ಡ ಬಸವ'. ಇದು ಬಿತ್ತನೆ ಮಳೆ. ಈ ಮಳೆ ಕೈ ಕೊಡಬಾರದು.

'ಉತ್ತರೆ ಮಳೆ' ಒಕ್ಕಲಿಗನಿಗೆ ಭಾಷೆ ಕೊಟ್ಟ ಮಳೆ. 'ಉತ್ತರೆ ಬರದಿದ್ದರೆ ಹೆತ್ತ ತಾಯಿ ಮಕ್ಕಳಿಗೆ ಹಿಟ್ಟಿಕ್ಕಲ್ಲ'. ಉತ್ತರೆ ಮಳೆ ಬಂದೇ ಬರುತ್ತದೆ ಎನ್ನುವುದು ಜನಪದರ ಅಚಲ ನಂಬಿಕೆ. ಜನಪದ ಕಾವ್ಯದ ಜೊತೆ ತಳಕು ಹಾಕಿಕೊಂಡ ಮಳೆಯಿದು.

ಚಿತ್ತೆ ಮಳೆ ರಾತ್ರಿಯಲ್ಲಿ ಮಾತ್ರ ಸುರಿಯುತ್ತದೆ. ಹಾಗಾಗಿ ಇದಕ್ಕೆ 'ಕುರುಡು ಚಿತ್ತೆ' ಎಂಬ ವಿಶೇಷಣವಿದೆ. ಜೂನ್ ತಿಂಗಳಿನಲ್ಲಿ ಬರುವ ಆದ್ರಿ ಬಿರುಸಿನ ಮಳೆ. ಅದರಲ್ಲೂ ಮಲೆನಾಡಿನಲ್ಲಿ ಇದರ ಅರ್ಭಟ ವಿಪರೀತ. ನೆಲ–ಮುಗಿಲು ಒಂದಾಗುವಂತೆ ಸುರಿಯುವ ಈ ಮಳೆಯನ್ನು ಮಲೆನಾಡಿಗರು 'ಆದ್ರಿ ಹಬ್ಬ' ಆಚರಣೆಯ ಮೂಲಕ ಸಂಭ್ರಮಿಸುತ್ತಾರೆ. ಸಾಗರ–ಸೊರಬ ತಾಲ್ಲೂಕುಗಳಲ್ಲಿ ಈ ಹಬ್ಬದ ಖದರು ಜೋರು. ಎಲ್ಲ ಮಳೆಗಳೂ ಹೆಣ್ಣು; ಮಗೆ ಮಳೆ ಮಾತ್ರ ಗಂಡು ಎಂಬ ನಂಬಿಕೆಯೂ ಇದೆ.

## ಮಳೆ ಹಬ್ಬ

ಉಳುಮೆ, ಬಿತ್ತನೆ, ನಾಟಿ, ಅಂತರ ಬೇಸಾಯ ಮುಂತಾದ ಪ್ರಮುಖ ಕೃಷಿ ಕೆಲಸಗಳು ಆಗಬೇಕಾದ ಸಮಯದಲ್ಲಿ ಹದವಾಗಿ ಮಳೆಯಾಗದಿದ್ದರೆ ರೈತರ ಪಾಡು ಹೇಳತೀರದು. ಸಕಾಲಕ್ಕೆ ಬೀಜ ಭೂಮಿಗೆ ಬೀಳದಿದ್ದರೆ ಮುಂದಿನ ದಿನಗಳಲ್ಲಿ ತಾವು ಮತ್ತು ತಮ್ಮನ್ನು ಆಶ್ರಯಿಸಿದ ಜೀವಾದಿಗಳ ಸ್ಥಿತಿಯನ್ನು ನೆನೆದೇ ಆತನಿಗೆ ದಿಗಿಲಾಗುತ್ತದೆ. ಮಳೆರಾಯನನ್ನು ಕರೆಯುವ ಅನೇಕ ಮಳೆಹಬ್ಬಗಳು ಕನ್ನಡನಾಡಿನುದ್ದಕ್ಕೂ ಚಾಲ್ತಿಯಲ್ಲಿವೆ.

ಮಳೆ ಬಾರದಿದ್ದಾಗ ಓಣಿ–ಓಣಿ ತಿರುಗಿ, ಜೋಳಿಗೆ ಹಾಕಿಕೊಂಡು ಭಿಕ್ಷೆ ಬೇಡುವ 'ಮಳೆ ಭಿಕ್ಷೆ' ಆಚರಣೆ ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಸಾಮಾನ್ಯ. ಹೆಚ್ಚು ದಿನ ಮಳೆ ಬಾರದಿದ್ದಾಗ, ಯುವಕನೊಬ್ಬನಿಗೆ ಸೀರೆ–ಕುಪ್ಪಸ ಉಡಿಸಿ, ಬಳೆ ತೊಡಿಸಿ, ಕುಂಕುಮ ಇಟ್ಟು ಹೆಣ್ಣಿನ ವೇಷ ತೊಡಿಸುತ್ತಾರೆ. ಆತ ಒಂದು ಕೈಯಲ್ಲಿ ಕೋಲು, ಮತ್ತೊಂದು ಕೈಯಲ್ಲಿ ನೀರು ತುಂಬಿದ ಗಡಿಗೆ ಹಿಡಿದು ಕಂಕುಳಲ್ಲಿ ಮಗುವೊಂದನ್ನು ಎತ್ತಿಕೊಂಡು ಭಿಕ್ಷೆ ಬೇಡುವ ಹೆಂಗಸಿನಂತೆ ಬೀದಿಗೆ ಹೊರಡುತ್ತಾನೆ. ಆತನ ಹಿಂದೆ ಉಳಿದವರೆಲ್ಲಾ ಹೊರಡುತ್ತಾರೆ. ಮನೆಮನೆಯ ಮುಂದೆ ನಿಂತು ದೊಡ್ಡ ಗಂಟಲಿನಲ್ಲಿ ಕೆಳಗಿನಂತೆ ಹಾಡುತ್ತಾರೆ.

ಯವ್ವ ನೀಡವ್ವ, ಯಕ್ಕ ನೀಡವ್ವ,
ಮಕ್ಕಳು ಮರಿ ಹಸಗೊಂಡಾವೆ,
ಮೂರು ದಿನದಿಂದ ಅನ್ನ ನೀರು ಕಂಡಿಲ್ಲ,
ಯವ್ವ ನೀಡವ್ವ, ಯಕ್ಕ ನೀಡವ್ವ
ನಿಮ್ಮ ಮನಿ ತಣ್ಣಗಿರತೈತಿ,
ನಿಮ್ಮ ಮಕ್ಕಳು ಮರಿಗೆ ಪುಣ್ಯ ಬರತೈತಿ...

